ದಿನಾಂಕಃ 21.12.2023 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ.ಬಿ.ಎಂ.ಎಲ್.ಜಿ.ವಕೀಲರಿಂದಃ ಆರೋಪಿಯ ಪರವಾಗಿಃ

10. ನಿಮ್ಮ ಹೆಂಡತಿಗೆ ಹೆರಿಗೆ ಆದ ಬಳಿಕ ಇಬ್ಬರಿಗೂ ಅನುಕೂಲವಾಗುತ್ತದೆ ಎಂದು ಉದ್ದೇಬೋೞರನಹಳ್ಳಿಯಲ್ಲಿ ಬಾಡಿಗೆ ಮನೆ ಮಾಡಿದ್ದೆವು ಎಂದರೆ ಸರಿ. ಉದ್ದೇಬೋೞರನಹಳ್ಳಿಯಿಂದ ಚಿಕ್ಕಮಗಳೂರಿಗೆ ಸುಮಾರು 15 ರಿಂದ 16 ಕಿ.ಮೀ ದೂರವಾಗುತ್ತದೆ. ಉದ್ದೇಬೋೞರನಹಳ್ಳಿಯಲ್ಲಿ ನಿಮಗೆ ಸಾಕಷ್ಟು ಬಾಡಿಗೆ ಸಿಗದ ಕಾರಣ ನೀವು ಚಿಕ್ಕಮಗಳೂರಿನಲ್ಲಿ ಆಟೋ ಚಾಲನೆ ಮಾಡಿಕೊಂಡಿದ್ದೀರಿ ಎಂದರೆ ಸರಿ. ಚಿಕ್ಕಮಗಳೂರಿನಿಂದ ವಾಪಸ್ಸು ಉದ್ದೇಶಬೋೞರನಹ್ಳಗೆ ಹೋಗಲು ಸಾಮಾನ್ಯವಾಗಿ 7 ರಿಂದ 10 ಗಂಟೆಯವರೆಗೆ ಆಗುತ್ತಿತ್ತು ಎಂದರೆ ಸರಿ. ದಿನಾಂಕಃ01.06.2016 ರಂದು ನಾನು ಚಿಕ್ಕಮಗಳೂರಿನಿಂದ ಉದ್ದೇಬೋೞರನಹಳ್ಳಯಲ್ಲಿ ಇರುವ ನಮ್ಮ ಮನೆಗೆ ಹೋದಾಗ ಸಮಯ ರಾತ್ರಿ 9 ರಿಂದ 9.30 ಗಂಟೆ ಆಗಿತ್ತು ಎಂರದೆ ಸರಿ. ಆ ದಿನಾ ನಾನು ಆಟೋದಲ್ಲಿ ಮನೆಗೆ ಹೋಗಿ ಆಟೋವನ್ನು ನಿಲ್ಲಿಸಿ ಕೆಳಗೆ ಇಳಿಯಬೇಕಾದರೆ ಮುಗ್ಗರಿಸಿ ಕೆಳಗೆ ಬಿದ್ದೆನು ಎಂದರೆ ಸರಿ. ಆ ಸಮಯದಲ್ಲಿ ನಿಮ್ಮ ಹೊಟ್ಟೆಗೆ

ಏನೋ ಚುಚ್ಚಿಕೊಂಡಿತು ಎಂದರೆ ಸರಿ. ಆಗ ನೀವು ಬೊಬ್ಬೆ ಹಾಕಿದಿರಿ ಎಂದರೆ ಸರಿ. ಆ ಸಮಯದಲ್ಲಿ ವಿದ್ಯುತ್ ಇರಲಿಲ್ಲ ಎಂದರೆ ಸರಿ. ನಂತರ ಚಾಸಾ.2 ರಿಂದ 4 ರವರು ಅಲ್ಲಿಗೆ ಓಡಿ ಬಂದರು ಎಂದರೆ ಸರಿ. ಅವರು ನನ್ನನ್ನು ನೋಡಿದ ಕೂಡಲೇ ಅಲ್ಲಿಂದ ನನ್ನನ್ನು ಚಿಕ್ಕಮಗಳೂರು ಆಸ್ಪತ್ರೆಗೆ ಸಾಗಿಸಿದರು ಎಂದರೆ ಸರಿ. ಸದರಿ ಆಸ್ಪತ್ರೆಗೆ ಬಂದಾಗ ನನಗೆ ಪ್ರಜ್ಞೆ ಇರಲಿಲ್ಲ ಎಂದರೆ ಸರಿ. ಸದರಿ ಆಸ್ಪತ್ರೆಯಲ್ಲಿ ಆಗುವುದಿಲ್ಲ ಎಂದು ಹೇಳಿ ನನ್ನನ್ನು ಮಂಗಳೂರಿನ ಆಸ್ಪತ್ರೆಗೆ ಕಳುಹಿಸಿದಾಗ ಅಲ್ಲಿಯೂ ಸಹ ನನಗೆ ಒಂದು ದಿನ ಪ್ರಜ್ಞೆ ಇರಲಿಲ್ಲ ಎಂದರೆ ಸರಿ. ಆ ಸಮಯದಲ್ಲಿ ಪೋಲೀಸರು ನಾನು ಹೇಳಿಕೆ ಕೊಡುವ ಸ್ಥಿತಿಯಲ್ಲಿ ಇದ್ದೆನೋ ಇಲ್ಲವೋ ಎಂದು ಖಾತ್ರಿ ಪಡಿಸಿಕೊಂಡ ಬಗ್ಗೆ ಗೊತ್ತಿಲ್ಲ. ನಿಪಿ.1 ಹೇಳಿಕೆಯನ್ನು ನಾನು ಕೊಟ್ಟಿರುವುದಿಲ್ಲ ಎಂದರೆ ಸರಿ. ನಿಮಗೆ ಪ್ರಜ್ಞೆ ಬಂದ ಬಳಿಕ ನಿಮ್ಮ ಹೆಂಡತಿ ನಿಮ್ಮ ವಿರುದ್ದ ದೂರನ್ನು ಕೊಟ್ಟಿರುವ ವಿಚಾರ ತಿಳಿಯಿತು ಎಂದರೆ ಸರಿ. ಸದರಿ ಪ್ರಕರಣದಲ್ಲಿ ಸಹ ಅಂತಿಮ ವರದಿ ಸಲ್ಲಿಸಲಾಗಿದ್ದು ಅದು ಇದೇ ನ್ಯಾಯಾಲಯದಲ್ಲಿ ಎಸ್.ಸಿ.140/2019 ರಂತೆ ಇದೇ ದಿನ ವಿಚಾರಣೆಯಲ್ಲಿ ಇರುತ್ತದೆ ಎಂರದೆ ಸರಿ. ನೀವು ಹಿಂದಿನ ಬಾರಿ ಸಾಕ್ಷ ನುಡಿದ ಸಮಯದಲ್ಲಿ ಪೋಲೀಸರು ಇದೇ ರೀತಿ

ಹೇಳಬೇಕು ಎಂದು ಹೇಳಿಕೊಟ್ಟಂತೆ ಸಾಕ್ಷ ನುಡಿದಿದ್ದೀರಿ ಎಂದರೆ ಸರಿ. ನಿಪಿ.2 ಪೋಟೋವನ್ನು ಯಾರು ಯಾವ ವಿಚಾರಕ್ಕೆ ತೆಗೆದುಕೊಂಡರು ಎಂದು ನನಗೆ ಗೊತ್ತಿಲ್ಲ. ನನ್ನ ಬಟ್ಟೆಗೆ ರಕ್ತ ಆಗಿತ್ತೇ ಇಲ್ಲವೇ ಎಂದು ಮತ್ತು ಆಗಿದ್ದರೆ ಎಲ್ಲಿಲ್ಲಿ ಆಗಿತ್ತು ಎಂದು ನನಗೆ ಗುರುತಿಸಲು ಆಗುವುದಿಲ್ಲ. ಮು.ಮಾ.1 ಚಾಕು ಇಲ್ಲಿ ಇತ್ತು ಅದು ಯಾರಿಗೆ ಸಂಬಂದಿಸಿದ್ದು ಎಂದು ನನಗೆ ಗೊತ್ತಿಲ್ಲ. ಸದರಿ ಚಾಕುವನ್ನು ಯಾರು ಯಾವ ವಿಚಾರಕ್ಕೆ ಪೋಲೀಸರಿಗೆ ಕೊಟ್ಟರು ಎಂದು ನನಗೆ ಗೊತ್ತಿಲ್ಲ.

11.ನನ್ನ ಚಿಕ್ಕಪ್ಪನ ಮಗ ಅಭಿಶೇಕ್ ಯಾವ ಪೋಟೋಗಳನ್ನು ಯಾವ ವಿಚಾರಕ್ಕೆ ತೆಗೆದುಕೊಂಡನು ಎಂದು ನನಗೆ ಗೊತ್ತಿಲ್ಲ. ನಿಮ್ಮ ಮುಖ್ಯವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿ. ನಿಮ್ಮ ಮುಖ್ಯವಿಚಾರಣೆಯಲ್ಲಿ ಪೋಲೀಸರು ಹೇಳಿಕೊಟ್ಟಂತೆ ಸಾಕ್ಷ ನುಡಿದಿರುತ್ತೀರಿ ಎಂದರೆ ಸರಿ. ನಿಪಿ.3 ಮತ್ತು ನಿಪಿ.4 ಪೋಟೋಗಳನ್ನು ಯಾರು ಯಾವ ವಿಚಾರಕ್ಕೆ ತೆಗೆದುಕೊಂಡರು ಎಂದು ನನಗೆ ಗೊತ್ತಿಲ್ಲ. ನಿಪಿ.5 ಸಿಡಿಯನ್ನು ಯಾರು ಯಾವ ವಿಚಾರಕ್ಕೆ ಹಾಜರುಪಡಿಸಿದ್ದರು ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯಲ್ಲಿ ನುಡಿದ ಸಾಕ್ಷ್ಯಕ್ಕೆ ವ್ಯತಿರಿಕ್ತವಾಗಿ ಈ ದಿನ ಪಾಟೀ ಸವಾಲಿನಲ್ಲಿ ಸಾಕ್ಷ್ಯ ನುಡಿದಿದ್ದರಿಂದ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಸಾಕ್ಷ್ಯ ಪಾಟೀ ಸವಾಲು ಮಾಡಲು ಅನುಮತಿ ನೀಡಲು ಸರ್ಕಾರಿ ಅಭಿಯೋಜಕರು ಕೋರಿದ ಮೇರೆಗೆ ಕಡತವನ್ನು ಪರಿಶೀಲಿಸಿ ಸಾಕ್ಷಿಯು ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುವುದು ಕಂಡುಬಂದ ಮೇರೆಗೆ ಅನುಮತಿ ನೀಡಲಾಯಿತು.)

<u>ಪಾಟೀಸವಾಲುಃ ಸರ್ಕಾರಿ ಅಭಿಯೋಜಕರವರಿಂದಃ-</u>

12. ಈಗ ನೀವು ಮತ್ತು ನಿಮ್ಮ ಹೆಂಡತಿಯಾದ ಆರೋಪಿ ವಿಚ್ಛೇದನ ಕೋರಿ ಜೊಂಟ್ ಪಿಟಿಷನ್ ಅರ್ಜಿ ಹಾಕಿರುತ್ತೀರಿ ಎಂದರೆ ಸರಿ. ಸದರಿ ಅರ್ಜಿಯಂತೆ ನಿಮಗೆ ವಿಚ್ಛೇದನ ಬೇಕಾಗಿರುವ ಕಾರಣ ಆರೋಪಿ ನಿಮಗೆ ಯಾವುದೇ ಹಲ್ಲೆ ಮಾಡಿಲ್ಲ ಎಂದು ಹೇಳುತ್ತಿದ್ದೀರಿ ಎಂದರೆ ಸರಿ.

<u>ಮುಂದುವರೆದ ಪಾಟೀ ಸವಾಲುಃ ಶ್ರೀ.ಬಿ.ಎಂ.ಎಲ್.ಜಿ.ವಕೀಲರಿಂದಃ ಆರೋಪಿಯ ಪರವಾಗಿಃ</u>

13. ನಿಮ್ಮ ಮುಖ್ಯವಿಚಾರಣೆಯಲ್ಲಿ ಹೇಳಿರುವುದು ಸುಳ್ಳು ಮತ್ತು ಈ ದಿನ ಪಾಟೀಸವಾಲಿನಲ್ಲಿ ತಿಳಿಸಿದ ಘಟನೆ ಸತ್ಯವಾಗಿರುತ್ತದೆ ಎಂದರೆ ಸರಿ.

<u>ಮರು ವಿಚಾರಣೆಃ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೆಚ್